ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಸುಳ್ಳು ಜಾತಿ ಪ್ರಮಾಣ ಪತ್ರಗಳು

1937 (2583) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ತಾಂತ್ರಿಕ ಶಿಕ್ಷಣ ಇಲಾಖೆಗೆ ಒಳಪಡುವ ಇಂಜಿನಿಯರಿಂಗ್ (ಸರ್ಕಾರಿ ಮತ್ತು ಅನುದಾನಿತ) ಕಾಲೇಜುಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಒದಗಿಸಿ ನೌಕರಿ ಪಡೆದ ಪ್ರಕರಣಗಳು ಏನಾದರೂ ಬೆಳಕಿಗೆ ಬಂದಿವೆಯೆ;

ಆ) ಬಂದಿದ್ದಲ್ಲಿ ಅವರುಗಳ ಬಗ್ಗೆ ಕೈಗೊಂಡ ಕ್ರಮಗಳೇನು? ಮತ್ತು ಅವರುಗಳನ್ನು ಕೆಲಸದಿಂದ ವಜಾ ಮಾಡಲಾಗಿದೆಯೇ?

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು. ನಾಲ್ಕು ಪ್ರಕರಣಗಳು ಬೆಳಕಿಗೆ ಬಂದಿವೆ.

ಆ) ಸದರಿ ನಾಲ್ಕು ಪ್ರಕರಣಗಳಲ್ಲಿ ಒಂದು ಪ್ರಕರಣವು ಸಿಆರ್ಇ ಸೆಲ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು ವಿಚಾರಣೆಯ ವರದಿ ಬಂದ ನಂತರ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಇನ್ನೆರಡು ಪ್ರಕರಣಗಳಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಒದಗಿಸಿರುವುದು ಸಮಾಜ ಕಲ್ಯಾಣ ಇಲಾಖೆಯವರಿಂದ ರುಜುವಾತಾಗಿರುವುದರ ಮೇರೆಗೆ ಸಂಬಂಧಿಸಿದ ಆಡಳಿತ ಮಂಡಳಿಯವರಿಗೆ ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದು, ಆದರಂತೆ, ಆಡಳಿತ ಮಂಡಳಿಯವರು ಸದರಿ ನೌಕರರಿಗೆ ಸೇವೆಯಿಂದ ವಜಾ ಮಾಡುವ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡಿರುತ್ತಾರೆ. ಸದರಿ ಪ್ರತಿವಾದಿಗಳು ಈ ಬಗ್ಗೆ ಜಿಲ್ಲಾ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿದ್ದು, ಈ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಮತ್ತೊಂದು ಪ್ರಕರಣವು ನೇಮಕಾತಿಯ ಪ್ರಾರಂಭಿಕ ಹಂತದಲ್ಲಿಯೇ ಬೆಳಕಿಗೆ ಬಂದಿದ್ದು, ಸಂಬಂಧಿಸಿದವರು ಈ ಬಗ್ಗೆ ನ್ಯಾಯಾಲಯಕ್ಕೆ ಮೊರೆ ಹೋಗಿರುವುದರಿಂದ ನ್ಯಾಯಾಲಯದ ತೀರ್ಪು ಬಂದ ನಂತರ ಆಡಳಿತ ಮಂಡಳಿಯವರು ಈ ಬಗ್ಗೆ ಕ್ರಮ ಕೈಗೊಳ್ಳಲಿದ್ದಾರೆ. ಸದರಿ ಪ್ರಕರಣದಲ್ಲಿ ನೇಮಕಾತಿಗೆ ಸರ್ಕಾರದ ಅನುಮೋದನೆಯನ್ನು ನೀಡಿರುವುದಿಲ್ಲ.

ವಿಶ್ವಬ್ಯಾಂಕ್ ಯೋಜನೆಯಿಂದ ತಾಂತ್ರಿಕ ಶಿಕ್ಷಣ ಇಲಾಖೆಗೆ ಅನುದಾನ

1938 (2584) ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವಿಶ್ವಬ್ಯಾಂಕ್ ಯೋಜನೆಯಿಂದ ಎಷ್ಟು ಕೋಟಿ ರೂ.ಗಳ ಅನುದಾನವನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆಗೆ ನೀಡಲಾಗಿದೆ ಮತ್ತು ಅದನ್ನು ಹೇಗೆ ಉಪಯೋಗಿಸಲಾಗಿದೆ;

ಆ) ಖರೀದಿಸಿರುವ ಯಂತ್ರೋಪಕರಣಗಳು (ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್‌ಗಳು) ಇವುಗಳ ಉದ್ದಿಶ್ಯ ಹಾಗೂ ಗುಣಮಟ್ಟದ ಬಗ್ಗೆ;

ಇ) ಸದರಿ ಖರೀದಿಯ ಸರ್ಕಾರದ ನಿಯಾಮಾವಳಿಗಳನ್ನು ಅನುಸರಿಸಿ ಪ್ರಸಿದ್ಧ ಕಂಪನಿಗಳಿಂದ ಖರೀದಿಸಲಾಗಿದೆಯೇ;

ಈ) ಮೆ: ಬ್ಲೂ ಸ್ಟಾರ್, ಇದರ ಮೂಲಕ ಹವಾನಿಯಂತ್ರಣಗಳನ್ನು ಖರೀದಿಸುವಾಗ 18 ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳ ನಕಲು ಸಾಲು ಮತ್ತು ಸಹಿಯನ್ನು ಮಾಡಿದ ಬಗ್ಗೆ ನಿರ್ದೇಶಕರು ದೂರನ್ನು ಸಲ್ಲಿಸಿದ್ದರೆ?

ಡಾ: ಜಿ.ಪರಮೇಶ್ವ (ಉನ್ನತ ಶಿಕ್ಷಣ ಸಚಿವರು) :

ಅ) ವಿಶ್ವಬ್ಯಾಂಕ್ ಯೋಜನೆಯಿಂದ ತಾಂತ್ರಿಕ ಶಿಕ್ಷಣ (ಪಾಲಿಟೆಕ್ನಿಕ್‌ಗಳ) ಅಭಿವೃದ್ಧಿಗಾಗಿ ಒಟ್ಟಾರೆ ಯೋಜನ ಆಯವ್ಯಯ ರೂ.942.410 ಮಿಲಿಯನ್ ರೂ.ನ ಮಂಜೂರಾತಿ ನೀಡಲಾಗಿದ್ದು, ಇದರಲ್ಲಿ ಯೋಜನೆ ಅಂತ್ಯದವರೆಗೆ (30-9-98 ರವರೆಗೆ) ರೂ.925.942 ಮಿಲಿಯನ್‌ಗಳ ಖರ್ಚು ಮಾಡಲಾಗಿದೆ. ಇದರಲ್ಲಿ ರೂ.760.005 ಮಿಲಿಯನ್‌ಗಳ ಮರುಪಾವತಿಗೆ ಕೋರಿದ್ದು ಒಟ್ಟಾರೆ ರೂ.758.396 ಮಿಲಿಯನ್ ಮರುಪಾವತಿ ವಿಶ್ವಬ್ಯಾಂಕ್‌ನಿಂದ ದೊರೆತಿದೆ. ಈ ಯೋಜನೆಯಲ್ಲಿ ಕೆಳಕಂಡಂತೆ ವೆಚ್ಚಗಳನ್ನು ಮಾಡಲಾಗಿದೆ.

1)	ಕಟ್ಟಡ ಕಾಮಗಾರಿಗಳಿಗಾಗಿ	350.228	ಮಿಲಿಯನ್
2)	ಉಪಕರಣಗಳ ಖರೀದಿಗಾಗಿ	361.980	"
3)	ಪಿಠೋಪಕರಣಗಳ ಖರೀದಿಗಾಗಿ	26.385	"
4)	ಗ್ರಂಥಾಲಯ (ಪುಸ್ತಕಗಳ) ಖರೀದಿಗಾಗಿ	17.245	"
5)	ವಾಹನಗಳ ಖರೀದಿಗಾಗಿ	6.234	"
6)	ತರಬೇತಿಗಾಗಿ (ದೇಶೀಯ ಮತ್ತು ವಿದೇಶಿ	13.182	"
7)	ಸಮಾಲೋಚನಾ ವೆಚ್ಚಗಳಿಗಾಗಿ (ದೇಶೀಯ ಮತ್ತು ವಿದೇಶಿ)	0.868	"
8)	ವೇತನ	116.159	"
9)	ನಿತ್ಯೋಪಯೋಗಿ ವಸ್ತುಗಳಿಗಾಗಿ	7.727	"
10)	ಅಪ್ಲಿಕೇಷನ್ ಮತ್ತು ಮೆಂಟೆನ್‌ಗಾಗಿ	25.934	"
	ಒಟ್ಟು	925.942	"

ಆ) ಸದರಿ ಯಂತ್ರೋಪಕರಣಗಳ ಪೈಕಿ ಕೆಲವನ್ನು ಕೇಂದ್ರ ಸರ್ಕಾರದ ಇಲಾಖೆಯಾದ (ಡಿ.ಜಿ.ಎನ್. ಮತ್ತು ಡಿ) ನವದೆಹಲಿ ಇವರ ಮೂಲಕ ಖರೀದಿಸಲಾಗಿದೆ ಉಳಿದ ಯಂತ್ರೋಪಕರಣ ಇತ್ಯಾದಿಗಳನ್ನು ವಿಶ್ವಬ್ಯಾಂಕ್ ನಿಯಮಾವಳಿ ಪ್ರಕಾರ ರಾಜ್ಯ, ರಾಷ್ಟ್ರ ಮತ್ತು

ಅಂತರಾಷ್ಟ್ರೀಯ ಮಟ್ಟದಲ್ಲಿ ವಿಪುಲವಾದ ಪ್ರಕಟಣೆಯನ್ನು ಕೊಟ್ಟು (ಎಲ್‌ಸಿಬಿ:ಐಸಿಬಿ) ಮೂಲ ತಯಾರಕರು: ಪ್ರಮುಖ ವಿತರಕರಿಂದ ಟೆಂಡರ್‌ಗಳನ್ನು ಪಡೆದು ನಂತರ ನಮ್ಮ ಸ್ಪೆಸಿಫಿಕೇಷನ್‌ಗೆ ಹೊಂದಿಕೊಳ್ಳುವ ಟೆಂಡರ್‌ಗಳನ್ನು ಭಾರತೀಯ ವಿಜ್ಞಾನ ಸಂಸ್ಥೆಯಂತಹ ಉನ್ನತ ಮಟ್ಟದ ಸಂಸ್ಥೆಗಳಲ್ಲಿನ ಸಂಬಂಧಪಟ್ಟ ಕ್ಷೇತ್ರದಲ್ಲಿನ ಪರಿಣತರನ್ನೊಳಗೊಂಡ ಸಮಿತಿಯನ್ನು ರಚಿಸಿ, ಸಮಿತಿಯ ಶಿಫಾರಸ್ಸಿನ ಮೇರೆಗೆ ಟೆಂಡರ್‌ಗಳನ್ನು ಒಪ್ಪಿಕೊಳ್ಳಲಾಗುತ್ತಿತ್ತು. 5.00 ಲಕ್ಷಕ್ಕಿಂತ ಕಡಿಮೆ ಮೌಲ್ಯದ ಉಪಕರಣಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಅಧ್ಯಕ್ಷರು ಮತ್ತು ಶಿಕ್ಷಣ, ಆರ್ಥಿಕ ಎಸ್.ಪಿ.ಡಿ., ಕೆ.ಜಿ.ಸಿ.ಸಿ. ಇಲಾಖೆಗಳ ಉನ್ನತ ಅಧಿಕಾರಿಗಳ ಪ್ರಾತಿನಿಧ್ಯ ಹೊಂದಿದೆ. ಕೇಂದ್ರ ಖರೀದಿ ಸಮಿತಿಯ ಮುಂದೆ ಮಂಡಿಸಲ್ಪಟ್ಟ ಅಲ್ಲಿ ಅನುಮೋದನೆ ದೊರೆತ ನಂತರವೇ ಮುಂದಿನ ಖರೀದಿ ಕ್ರಮ ಕೈಗೊಳ್ಳಲಾಗುತ್ತಿತ್ತು. 5.00 ಲಕ್ಷಕ್ಕಿಂತ ಹೆಚ್ಚಿನ ದರದ ಉಪಕರಣಗಳ ಟೆಂಡರ್‌ಗಳನ್ನು ಆವರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆ ಪಡೆದ ನಂತರವೇ ಸಂಬಂಧಪಟ್ಟ ಕಂಪನಿಗಳಿಗೆ ಆದೇಶ ನೀಡಿ ಖರೀದಿಸಲಾಗಿದೆ. ಆದಕಾರಣ ಖರೀದಿಯಲ್ಲಿ ಯಾವುದೇ ಏಕವ್ಯಕ್ತಿಯ ನಿರ್ಧಾರವಿರುವುದಿಲ್ಲ. ಇದರಲ್ಲಿ ಖರೀದಿಸಿರುವ ಉಪಕರಣಗಳು ಪ್ರಸ್ತುತ ಪಠ್ಯಕ್ರಮಕ್ಕನುಗುಣವಾಗಿ ಇರುತ್ತವೆ. ಎಲ್ಲಾ ಉಪಕರಣಗಳನ್ನು ಪ್ರಸಿದ್ಧ ಕಂಪನಿ (ಮೂಲ ತಯಾರಕರು) ವಿತರಕರಿಂದ ಖರೀದಿಸಲಾಗಿದೆ ಮತ್ತು ಇವುಗಳ ಗುಣಮಟ್ಟ ಉತ್ತಮವಾಗಿವೆ.

ಇ) ಟೆಂಡರ್‌ಗಳನ್ನು ಕರೆಯುವಾಗ ಖರೀದಿಸಬೇಕೆಂದಿರುವ ಉಪಕರಣಗಳ ಟೆಕ್ನಿಕಲ್ ಸ್ಪೆಸಿಫಿಕೇಷನ್ ಕೊಟ್ಟು ರಾಜ್ಯ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖ ದಿನ ಪತ್ರಿಕೆಗಳ ಮೂಲಕ ಸಾಕಷ್ಟು ಕಾಲಾವಕಾಶವನ್ನು ಕೊಡಲು ವಿಪುಲ ಪ್ರಕಟಣೆಯನ್ನು ಕೊಡಲಾಗುತ್ತಿತ್ತು. ತದನಂತರ ಟೆಂಡರ್‌ಗಳನ್ನು ಮಾರುವಾಗ ಖರೀದಿಸಬೇಕೆಂದಿದ್ದ ಉಪಕರಣಗಳ ಅಂದಾಜು ಒಟ್ಟು ಮೊತ್ತದ ಶೇಕಡ 2 ರಷ್ಟನ್ನು ಇ.ಎಂ.ಡಿ. ತೆಗೆದುಕೊಳ್ಳಲಾಗುತ್ತಿತ್ತು. ಈ ಮೇಲೆ ತಿಳಿಸಿದ ಹಾಗೆ ಟೆಂಡರ್‌ಗಳನ್ನು ತೆರೆದು ತಜ್ಞರ ಮೌಲ್ಯ ಪರ ಸಮಿತಿ (ಟಿಇಸಿ)ಯ ಶಿಫಾರಸ್ಸಿನ ಮೇರೆಗೆ ಮತ್ತು ಸಮಿತಿಯ ಉನ್ನತ ಮಟ್ಟದ ಸಮಿತಿ ಅನುಮೋದನೆ ಮೇರೆಗೆ ಸಂಬಂಧಪಟ್ಟ ಕಂಪನಿಗಳಿಗೆ ಸರಬರಾಜು ಆದೇಶ ನೀಡುವಾಗ ಖರೀದಿ ಆದೇಶದ ಒಟ್ಟು ಮೊತ್ತಕ್ಕೆ ಸಮನಾ ಶೇಕಡ 10 ರಷ್ಟರ ಭದ್ರತಾ ಠೇವಣಿಯನ್ನು ಪಡೆದುಕೊಂಡು ನಂತರವೇ ಅಂತಿಮ ಖರೀದಿ ಆದೇಶವನ್ನು ನೀಡಲಾಗುತ್ತಿದ್ದರು ಎಲ್ಲಾ ಆದೇಶಗಳನ್ನು ಪ್ರಸಿದ್ಧ ಕಂಪನಿ (ಮೂಲ ತಯಾರಕರು : ವಿತರಣಕಾರರು) ಇವರಿಂದ ಖರೀದಿಸಲಾಗಿದೆ. ಭದ್ರತಾ ಠೇವಣಿಯನ್ನು ಸಂಬಂಧಪಟ್ಟ ಕಂಪನಿಗಳಿಗೆ ಹಿಂದಿರುಗಿಸುವಾಗ ಸರಬರಾಜು ಪ್ರಕ್ರಿಯೆಯನ್ನು ಆದೇಶದ ಪ್ರಕಾರ ಪೂರೈಸಲಾಗಿದೆಯೇ ಎಂಬುದನ್ನು ಧೃಡಪಡಿಸಿಕೊಂಡ ನಂತರವೇ ಹಿಂದಿರುಗಿಸಲಾಗುತ್ತಿತ್ತು.

ಈ) ಮೆ: ಬ್ಲೂ ಸ್ಟಾರ್ (ಲಿ), ಬೆಂಗಳೂರು ಇದು ಹವಾನಿಯಂತ್ರಣ ಯಂತ್ರಗಳ ತಯಾರಿಕೆಯಲ್ಲಿ ಒಂದು ಪ್ರಮುಖವಾದ ಕಂಪನಿ. ಈ ಕಂಪನಿಗೆ ಡಿ.ಟಿ.ಎಸ್. ಮತ್ತು ಡಿ ನವದೆಹಲಿ ಇವರು ನಿಗಧಿಪಡಿಸಿದ ದರ ಗುತ್ತಿಗೆಯ ಆಧಾರದ ಮೇಲೆ ಒಟ್ಟು 34 ಹವಾನಿಯಂತ್ರಣ ಯಂತ್ರಗಳನ್ನು ಸರಬರಾಜು ಮಾಡಲು ಆದೇಶ ನೀಡಲಾಗಿತ್ತು. ಈ ರೀತಿಯಾಗಿ ಆದೇಶಿಸಲಾಗಿದ್ದ

ಹವಾನಿಯಂತ್ರಣ ಯಂತ್ರಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಸರಬರಾಜು ಮಾಡಿ, ಅವುಗಳನ್ನು ಸ್ಥಾಪಿಸಿ, ಕಾರ್ಯ ರೂಪಕ್ಕೆ ತರುವ ಹೊಣೆಯನ್ನು ಸದರಿ ಕಂಪನಿ ಅವರ ಜವಾಬ್ದಾರಿಯ ಬೇರೊಂದು ಕಂಪನಿಗೆ ಸಬ್ ಕಾಂಟ್ರಾಕ್ಟ್ ಕೊಟ್ಟಿದ್ದರು. ಇದು ಒಂದು ಕೇಂದ್ರೀಕೃತ ಖರೀದಿಯಾದ ಪ್ರಯುಕ್ತ ಸಂಬಂಧಪಟ್ಟ ಕಂಪನಿಯವರು ಸಂಬಂಧಪಟ್ಟ ಸಂಸ್ಥೆಗಳಿಗೆ ಖರೀದಿ ಆದೇಶದ ಪ್ರಕಾರ ಸರಬರಾಜು ಮಾಡಿದ ಮೇಲೆ ಬಿಲ್ಲುಗಳಲ್ಲಿ ಯಂತ್ರೋಪಕರಣಗಳನ್ನು ಕಳುಹಿಸಲಾಗುತ್ತಿತ್ತು (ಕೆಲವೊಮ್ಮೆ ನೇರವಾಗಿ ಅಂಚೆ ಮೂಲಕ ಕೆಲವೊಮ್ಮೆ ಸಂಬಂಧಪಟ್ಟ ಕಂಪನಿಯವರ ಮುಖೇನ ಕಳುಹಿಸಲಾಗುತ್ತಿತ್ತು) ಇಂತಹ ಬಿಲ್ಲುಗಳನ್ನು ನಿಯಮಾನುಸಾರ ಪರಿಶೀಲಿಸಿ ಹಣ ಪಾವತಿ ಮಾಡಲಾಗುತ್ತಿತ್ತು. (ಚೆಕ್ ಮುಖೇನ) ಇದೇ ರೀತಿ ಮೆ:ಬ್ಲೂಸ್ಟಾರ್ ಲಿಮಿಟೆಡ್ ಇವರ ಸಬ್ ಕಾಂಟ್ರಾಕ್ಟ್‌ದಾರರು ಹವಾನಿಯಂತ್ರಣ ಯಂತ್ರಗಳನ್ನು ಸರಬರಾಜು ಮಾಡಿ ಕಾರ್ಯರೂಪಕ್ಕೆ ತಂದು ಸಂಬಂಧಪಟ್ಟ ಬಿಲ್ಲುಗಳಿಗೆ ಪ್ರಿನ್ಸಿಪಾಲರಿಂದ ದೃಢೀಕರಣ ಹಾಕಿಸಿ, ಹಣ ಪಾವತಿಗಾಗಿ ಈ ನಿರ್ದೇಶನಾಲಯಕ್ಕೆ (ಕೆಲವನ್ನು ಉಳಿದು) ಸಲ್ಲಿಸಿದರು. ಈ ಪ್ರಕ್ರಿಯೆ ಮಾರ್ಚ್ ಅಂತ್ಯದಲ್ಲಿದ್ದರಿಂದ ದೃಢೀಕರಣ ಮತ್ತು ಬಿಲ್ಲಿನ ಹಣವನ್ನು ಪರಿಶೀಲಿಸಿ ಬಿಲ್ಲುಗಳನ್ನು ಪಾವತಿಸಲಾಯಿತು. ತದನಂತರ ಈ ವಿಷಯ ಬೆಳಕಿಗೆ ಬಂದು ಒಟ್ಟು 18 ಸಂಸ್ಥೆಗಳ ಪ್ರಿನ್ಸಿಪಾಲರ ಸಹಿ ಮತ್ತು ಸೀಲುಗಳನ್ನು ನಕಲು ಮಾಡಿ ಸಲ್ಲಿಸಲಾಗಿತ್ತು. ಈ ಬಗ್ಗೆ ಪೂರ್ವಾನ್ವಯವಾಗಿ ಒಂದು ತನಿಖೆ ನಡೆಸಿ ಅರುಸಾಬೀತಾದ ನಂತರ ಒಂದು ವಿವರವಾದ ತನಿಖೆ ನಡೆಸಲಾಯಿತು. ತನಿಖೆಯಲ್ಲಿ ಬೆಳಕಿಗೆ ಬಂದಂತೆ ಈ ನಕಲಿಕೃತ್ಯ ನೇರವಾಗಿ ಕಂಪನಿಯವರ ಗಮನಕ್ಕೆ ಬಾರದೆ ಸಬ್‌ಕಂಟ್ರಾಕ್ಟ್‌ದಾರರು ಮಾಡಿದ್ದುದನ್ನು ಕಂಪನಿಯವರು ಒಪ್ಪಿಕೊಂಡಿರುತ್ತಾರೆ. ಈ ತಪ್ಪಿಗೆ ಈಗಾಗಲೇ ಕಂಪನಿಯಿಂದ ಸಮಿತಿ ಶಿಫಾರಸ್ಸಿನ ಪ್ರಕಟಣೆ ರೂ.51,877-00 ದಂಡವಾಗಿ ವಸೂಲಿ ಮಾಡಲ್ಪಟ್ಟಿರುವುದರಿಂದಲೂ ಪ್ರಸ್ತುತ ಎಲ್ಲಾ 18 ಸಂಸ್ಥೆಗಳ ಪ್ರಿನ್ಸಿಪಾಲರಿಂದ ಅಸಲಿ ದೃಢೀಕರಣ ಪತ್ರ ಪಡೆಯಲಾಗಿದೆ ಹಾಗೂ ಈಗಾಗಲೇ ಸರಬರಾಜು ಮಾಡಿರುವ ಹವಾನಿಯಂತ್ರಣ ಯಂತ್ರಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುವುದರಿಂದಲೂ ಈ ವಿಷಯದಲ್ಲಿ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಫೀಲ್ಡ್ ಮಾರ್ಷಲ್ ಕರಿಯಪ್ಪ ಇವರ ಹೆಸರಿನಲ್ಲಿ ಸೈನಿಕ ಶಾಲೆ ತೆರೆಯುವುದು

1939 (2585) ಶ್ರೀ **ಗುರುಸ್ವಾಮಿ ಎ.ಎಸ್.** (ಚಾಮುಂಡೇಶ್ವರಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ವೀರ ಪುತ್ರ ರಾಷ್ಟ್ರದ ಪ್ರಥಮ ಫೀಲ್ಡ್ ಮಾರ್ಷಲ್ ಜನರಲ್ ಕರಿಯಪ್ಪರವರ ಹೆಸರಿನಲ್ಲಿ ಸೈನಿಕ ಶಾಲೆಯನ್ನು ತೆರೆಯಲು ಸರ್ಕಾರಕ್ಕೆ ಯಾವುದಾದರೂ ಸಮಿತಿ ಶಿಫಾರಸ್ಸು ಮಾಡಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀ **ಹೆಚ್.ವಿಶ್ವನಾಥ್** (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.